ಶ್ರೀ ಹೆಚ್.ಡಿ. ಬಸವರಾಜು : ಹಕ್ಕುಚ್ಯುತಿ ಏಕೆ ಬೇಕಾಗುತ್ತದೆಂದರೆ, ಈ ಪ್ರಕರಣಗಳು ಮತ್ತೆ ಈ ರಾಜ್ಯದಲ್ಲಿ ಮರುಕಳಿಸಬಾರದು ಎಂಬ ಉದ್ದೇಶದಿಂದ ಈ ಪ್ರಕರಣಕ್ಕೆ ಮಹತ್ವ ಕೊಡಿ.

ಶ್ರೀ ಸಿದ್ದರಾಮಯ್ಯ : ನಾನು ಇದನ್ನು ಒಪ್ಪುವುದಿಲ್ಲ ಯಾವುದೇ ಅಧಿಕಾರಿ ಶಾಸಕರ ಜೊತೆ ಅನುಚಿತವಾಗಿ ವರ್ತಿಸಿದರೆ, ಬೇಜವಾಬ್ದಾರಿಯಿಂದ ದುರಹಂಕಾರದಿಂದ ವರ್ತಿಸಿದರೆ ಜನಪ್ರತಿನಿಧಿಗಳಿಗೆ ಗೌರವ ಕೊಡಬೇಕಾದದ್ದು ಅವರ ಕರ್ತವ್ಯ. ಆದ್ದರಿಂದ ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಅದು ತಪ್ಪು ಅದನ್ನು ಖಂಡಿಸಬೇಕಾಗುತ್ತದೆ. ಅದರ ಬಗ್ಗೆ ಬೇರೆ ಮಾತಿಲ್ಲ. ಅವರ ಬಗ್ಗೆ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು : ಪ್ರತಿ ಸಲ ಈ ವಿಚಾರ ಬಂದಾಗ ಪ್ರಸ್ತಾಪ ಮಾಡಲು ಆಗುವುದಿಲ್ಲ. ಯಾರೋ ಒಬ್ಬರ ಮೇಲಾದರೂ ಕ್ರಮ ತೆಗೆದುಕೊಳ್ಳಬೇಕಲ್ಲಾ? ಅದರಿಂದ ಒಳ್ಳೆಯ ಸಂದೇಶ ಹೋಗುತ್ತದೆ.

Sri Siddaramaiah : We are going to take appropriate action against the concerned police officer.

ಅಧ್ಯಕ್ಷರು : ಮಾನ್ಯ ಬಸವರಾಜುವರವರೆ, ನಾನೂ ಇದರ ಬಗ್ಗೆ ಸರ್ಕಾರದಿಂದ ವರದಿಯನ್ನು ತರಿಸುತ್ತೇನೆ. ಹಕ್ಕುಚ್ಯುತಿ ಪ್ರಶ್ನೆ ಬಂದಾಗ ಮಾಡೋಣ, ವರದಿ ತರಿಸಿ ಏನು ಮಾಡಬೇಕೋ ನಿರ್ಧಾರ ತೆಗೆದುಕೊಳ್ಳುತ್ತೇನೆ.

Sri S. Rajendra : Including the police officer.

Sri Siddaramaiah : Yes, including the police officer.

ವಿಷಯ : 2: ಹೊಸಕೋಟೆ ರೈತ ಮುಖಂಡ ನಾರಾಯಣಸ್ವಾಮಿಯ ಕೊಲೆ ಕುರಿತು.

ಶ್ರೀ ವಾಟಾಳ್ ನಾಗರಾಜ್ : ಹೊಸಕೋಟೆಯ ರೈತ ಸಂಘದ ಮಾಜಿ ಅಧ್ಯಕ್ಷರಾದಂಥ ನಾರಾಯಣ ಸ್ವಾಮಿಯವರ ಕೊಲೆಯಾಗಿದೆ, ರಾಜಕಾರಣದ ಕೊಲೆಗಳು ಬಹುಶಃ ಎಲ್ಲಾ ಕಡೆ ರಾಜ್ಯದಲ್ಲಿ ತಾಲ್ಲೂಕಿನಲ್ಲಿ ಜಿಲ್ಲೆಗಳಲ್ಲಿ ನಡೆಯುತ್ತಿದೆ. ಇದಕ್ಕೆ ಎಲ್ಲಾದರು ಒಂದು ಕಡೆ ಕಾನೂನು ಸುವ್ಯವಸ್ಥೆ ಹದಗೆಟ್ಟರೆ ನಾರಾಯಣ ಸ್ವಾಮಿಯವರ ಕೊಲೆ ನಡೆದಿದ್ದರು, ಏಕೆ ಅವರ ಕೊಲೆಯಾಯಿತು? ನಮ್ಮ ಮಾಜಿ ಶಾಸಕರಾದ ಮಾನ್ಯ ಬಚ್ಚೇಗೌಡರ ಕ್ಷೇತ್ರವಾದ ಹೊಸಕೋಟೆ, ಅಲ್ಲಿನ ಚುನಾವಣೆ ವ್ಯವಸ್ತೆ ಇರಬಹುದು ಅಥವಾ ಚುನಾವಣೆ ಜಗಳಗಳು ಇರಬಹುದು ಏನೇ ಇರಬಹುದು, ರಾಜಕಾರಣವನ್ನು ಈ ಮಟ್ಟಕ್ಕೆ ತೆಗೆದುಕೊಂಡು ಹೋಗತಕ್ಕದ್ದು ಒಳ್ಳೆಯದಲ್ಲ. ನಾನು ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತಿದ್ದೇನೆ. ಹೊಸಕೋಟೆಯಲ್ಲಿ ನಾರಾಯಣಗೌಡರ ಕೊಲೆ ಸುಮಾರು 25ನೇ ತಾರೀಖು ಆಯಿತು, ಬಹುಶಃ ರಾಜಕೀಯ ಕೊಲೆ, ಈ ರೀತಿ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ನಮ್ಮದು ಏನೇ ರಾಜಕೀಯವಿರಲಿ ಆದರೆ ಕೊಲೆ ಮಾಡತಕ್ಕ ಮಟ್ಟಕ್ಕೆ ಹೋದರೆ ಪರಿಸ್ಥಿತಿ ಏನು? ಇದು ಬಹಳ ಅತ್ಯಂತ ಗಂಭೀರವಾದ ಪರಿಸ್ಥಿತಿ, ಕೊಲೆ ಮಾಡಿರುವವರು ಯಾರು ಎಂದು ಗೊತ್ತಿದೆ, ಆದರೂ ಸರ್ಕಾರ ಇನ್ನು ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ ಯಾರು ಕೊಲೆ ಮಾಡಿದ್ದಾರೆ ಎಂಬ ಬಗ್ಗೆ ಪ್ರತಿಯೊಂದೂ ಗೊತ್ತಿದೆ, ಇಷ್ಟೆಲ್ಲಾ ಗೊತ್ತಿದ್ದರು ಸರ್ಕಾರ ಇದರ ಬಗ್ಗೆ ಪ್ರಾಮಾಣಿಕವಾದಂಥ ಪ್ರಯತ್ನ ಮಾಡಿಲ್ಲ. ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಯವರನ್ನು ಗಮನಸೆಳೆಯುತ್ತಿದ್ದೇನೆ, ಹೊಸಕೋಟೆಯ ನಾರಾಯಣಗೌಡರು ಎಂದು ಮಾಜಿ ರೈತ ಸಂಘದ ಅಧ್ಯಕ್ಷರು, ಜಾತ್ಯಾತೀತ ಜನತಾ ದಳದ

ಮುಖಂಡರು ಇವರ ಕೊಲೆಯಾಗಿದೆ, ಕೊಲೆ ಮಾಡಿದವರು ಯಾರು ಎಂದು ಗೊತ್ತಿದೆ, ಆದರೆ ಅವರನ್ನು ಇದುವರೆಗೆ ಬಂಧನ ಮಾಡಿಲ್ಲ. ಆದ್ದರಿಂದ ತಾವು ಇದರ ಬಗ್ಗೆ ಪ್ರಾಮಾಣಿಕವಾದ ಒಂದು ಹೇಳಿಕೆಯನ್ನು ಈ ಸದನದಲ್ಲಿ ಕೊಡಬೇಕೆಂದು ತಮ್ಮ ಮೂಲಕ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಭಟ್ಕಳದ ತಿಮ್ಮಪ್ಪನಾಯಕನ ಕೊಲೆಯ ಬಗ್ಗೆ ಇಲ್ಲಿ ವಿವರವಾಗಿ ಪ್ರಸ್ತಾಪವಾಯಿತು. ಸರ್ಕಾರ ಉತ್ತರ ಕೊಡುತ್ತೇನೆಂದು ಹೇಳಿದ್ದರು. ಅಪರಾಧಿಗಳು ಯಾರು ಎಂದು ಗೊತ್ತಿದೆ, ಅವರಿಗೆ ರಕ್ಷಣೆ ಸಿಗುತ್ತಿದೆ, ಅದರ ಬಗ್ಗೆಯೂ ಹೇಳಬೇಕು. ಇದನ್ನು ಪ್ರಸ್ತಾಪ ಮಾಡಿ ಐದು ದಿವಸಗಳಾಯಿತು. ವಾಟಾಳ್ ನಾಗರಾಜ್‌ರವರದ್ದೂ ಪ್ರಮುಖವಾದುದು.

ಅಧ್ಯಕ್ಷರು : ತಿಮ್ಮಪ್ಪನಾಯಕರ ಬಗ್ಗೆ ಪ್ರಶ್ನೆ ಎತ್ತಿದ್ದರು, ಇನ್ನೊಬ್ಬರು ನಮ್ಮ ಹೆಗ್ಡೆಯವರು ಇನ್ನೊಂದು ಕೊಲೆಯ ಬಗ್ಗೆ ಪ್ರಸ್ತಾಪಮಾಡಿದ್ದರು. ಈ ರೀತಿ ಎರಡು ಮೂರು ಜನ ಸದಸ್ಯರು ಕೊಲೆ ವಿಚಾರದ ಬಗ್ಗೆ ಎತ್ತಿದ್ದರು. ಬಹಳ ಗಂಭೀರವಾದುದು, ಸರ್ಕಾರ ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡುವ ಅಗತ್ಯವಿದೆ. ಅದು ಮಾನ್ಯ ಮುಖ್ಯಮಂತ್ರಿಯವರ ಕೈಯಲ್ಲಿದೆ. ಮುಖ್ಯಮಂತ್ರಿಗಳು ಆ ಖಾತೆಯನ್ನು ಹೊಂದಿರುವುದರಿಂದ ಅವರು ಬರಲಿ, ಅದರ ಬಗ್ಗೆ ಸಮಗ್ರವಾಗಿ ಉತ್ತರವನ್ನು ಕೊಡಿಸೋಣ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಹೊಸಕೋಟೆಯ ನಾರಾಯಣಗೌಡರ ಕೊಲೆಯು ಎರಡು ಮೂರು ದಿವಸಗಳ ಹಿಂದೆ ಆಗಿದೆಯೆಂದು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರಿಂದ ವರದಿಯನ್ನು ತರಿಸಿಕೊಂಡು ಈ ಸದನದಲ್ಲಿ ಹೇಳಿಕೆಯನ್ನು ಮಾಡುತ್ತೇವೆ. ಹಾಗೆಯೆ ಮಾನ್ಯ ಯಡಿಯೂರಪ್ಪನವರು ಎತ್ತಿರುವ ವಿಚಾರದ ಬಗ್ಗೆ ಕೂಡ ಅದು ಏನಾಗಿದೆ? ಯಾವ ಪರಿಸ್ಥಿತಿಯಲ್ಲಿದೆ ಎಂಬುದನ್ನು ನೋಡಿ ಇವತ್ತೇ ಹೇಳಿಕೆಯನ್ನು ಕೊಡಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಒಂದು ಕಾರ್ಯಕ್ರಮಕ್ಕೆ ಹೋಗಿದ್ದಾರೆ ಗೃಹ ಇಲಾಖೆಯಿಂದ ಅದರ ವಿಚಾರಣೆ ಯಾವ ಮಟ್ಟಕ್ಕೆ ಹೋಗಿದೆ, ಅಪರಾಧಿಯನ್ನು ಅರೆಸ್ಟ್ ಮಾಡಿದ್ದಾರೋ ಇಲ್ಲವೋ, ಏನಾಗಿದೆ ಎಂಬ ಬಗ್ಗೆ ಸಂಪೂರ್ಣವಾದ ವಿವರವನ್ನು ಪಡೆದುಕೊಂಡು ಸ್ಟೇಟ್‌ಮೆಂಟ್ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಭಟ್ಕಳದ ಬಗ್ಗೆ ಒಂದು ವಾರದಿಂದ ಉತ್ತರ ಕೊಡುತ್ತಾರೆಂದು ಕಾದಿದ್ದೇವೆ. ಮಾನ್ಯ ಸಚಿವರು ಇವತ್ತು ಕೊಡುತ್ತೇವೆಂದು ಹೇಳಿದ್ದಾರೆ, ಅದನ್ನು ಕೊಡಿಸುವ ಬಗ್ಗೆ ತಾವು ಗಮನ ಕೊಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಇದರ ಬಗ್ಗೆ, ಮಾನ್ಯ ಮುಖ್ಯಮಂತ್ರಿಯವರು ಮಧ್ಯಾಹ್ನ ಬರುತ್ತಾರೆ, ಆಗ ಕೊಡಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸೋಮವಾರ ಹೇಳಿಕೆಯನ್ನು ಮಾಡಿಸುತ್ತೇನೆಂದು ಸರ್ಕಾರದವರು ಹೇಳಿದ್ದರು, ಈಗ ಇನ್ನೊಂದು ಸೋಮವಾರ ಬಂತು. ಇವತ್ತು ಮಂಗಳವಾರ.

ಅಧ್ಯಕ್ಷರು : ಈಗ ಅರ್ಜಿಗಳನ್ನು ಒಪ್ಪಿಸುವುದು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆ ಏನಾಯಿತು?

ಅಧ್ಯಕ್ಷರು : ಮಾನ್ಯ ಶೆಟ್ಟರ್‌ರವರೆ ಇವತ್ತು ಬಹಳ ಬಿಸ್‌ನೆಸ್ ಇದೆ. ನಿಯಮ 69ರ ಮೇಲೆ ಎರಡು ವಿಚಾರಗಳು ಇದೆ, ಅನಂತರ, ಅರ್ಧಗಂಟೆ ಚರ್ಚೆಗಳು ಬಹಳ ಮುಖ್ಯವಾದದ್ದು